# ಆಹಾ ಸುದ್ದಿ!

★ ಸಸಿತೋಟ



ಇದು ಮೆಕ್ಸಿಕೋದಲ್ಲಿರುವ ಸಿನಿಮಾ ಹಾಲ್. ಹಾಲ್‌ನಲ್ಲಿ ನೊಣ ಹೊಡೆಯುವ ಕೆಲಸ ಮಾಡುತ್ತಿದ್ದ ಮಾಲೀಕರು ತಲೆ ಓಡಿಸಿದರು. ತಮ್ಮದೇ ಆದ ಪೀಠೋಪಕರಣ ಮಳಿಗೆಯಿಂದ ಜೋಡಿ ಮಂಚಗಳನ್ನು ಸಿನಿಮಾ ಹಾಲ್‌ನಲ್ಲಿ ಜೋಡಿಸಿ ಪ್ರೇಮಿಗಳ ಜೋಡಿಗಳು ಬರುವಂತೆ ಮಾಡಿದರು. 'ಇದು ಪ್ರೇಮವನ್ನು ಜಾಗೃತಗೊಳಿಸುತ್ತದೆ' ಎಂಬ ಬೋರ್ಡ್ ಬೇರೆ. ಪ್ರೇಮವನ್ನು ಜಾಗೃತಗೊಳಿಸಲು ಪ್ರದರ್ಶಿಸುವ ಸಿನಿಮಾ ಹೇಗಿರುತ್ತದೋ!



ಚೀನಾದ ಭದ್ರತಾ ಸಿಬ್ಬಂದಿ ಕುಯಿ ಜುಗಾವೊ ಸೂಜಿಯ ಮೇಲೆ ಉಷ್ಟ್ರ ಪಕ್ಷಿಯ ಮೊಟ್ಟೆಯನ್ನು ಬ್ಯಾಲನ್ಸ್ ಮಾಡುವುದರಲ್ಲಿ ಪರಿಣಿತ. ಕಳೆದ ಆರು ವರ್ಷಗಳಿಂದ ಪ್ರಯತ್ನಿಸಿ ಯಶಸ್ವಿಯಾಗಿರುವ ಈತ ಒಮ್ಮೆಲೇ ಮೂರು ಮೊಟ್ಟೆಗಳನ್ನು ಬ್ಯಾಲನ್ಸ್ ಮಾಡಿ ದಾಖಲೆ ಮಾಡಿದ್ದಾನಂತೆ. ಭದ್ರತೆ ಮಾಡಲು ಕೆಲಸವೇ ಇಲ್ಲದಿದ್ದರೆ ಇಂತಹ ದಾಖಲೆಯನ್ನಾದರೂ ಮಾಡಬಹುದು ಎಂದು ಕುಯಿ ತೋರಿಸಿಕೊಟ್ಟಿದ್ದಾನೆ.

ಕಳೆದ 20 ವರ್ಷಗಳಲ್ಲಿ ನಡೆದ ಅಧ್ಯಯನವೊಂದು ಮಹಿಳೆಯರಿಗಿಂತ ಪುರುಷರೇ ಹೆಚ್ಚು ಮೂರ್ಖರು ಎಂದು ಹೇಳಿದೆ. ಈ ಅಧ್ಯಯನ ಅತ್ಯಂತ ಮೂರ್ಖತನದಿಂದ ಸತ್ತವರಲ್ಲಿ ಪುರುಷರೇ ಹೆಚ್ಚು ಎಂಬುದನ್ನು ಸಾಬೀತು ಮಾಡಿದೆಯಂತೆ. ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಇದು ಪ್ರಕಟವಾಗಿದ್ದು, ಶೆ. 90ರಷ್ಟು ಮೂರ್ಖರು ಪುರುಷರೇ ಎಂದು ಹೇಳಿದೆ. ರೈಲಿನ ಹಿಂದೆ ಟ್ರಾಲಿ ಕಟ್ಟಿಕೊಂಡು ಉಚಿತವಾಗಿ ಮನೆ ಸೇರಲು ಯೋಚಿಸಿದವ ಯಮಲೋಕ ಸೇರಿದ್ದು, ಸಾಕಷ್ಟು ಸ್ಟಾಂಪ್ ಹಚ್ಚದೇ ವಾಪಸ್ ಬಂದ ಲೆಟರ್ ಬಾಂಬ್ ಅನ್ನು ತಾನೇ ತೆರೆದ ಉಗ್ರ.. ಹೀಗೆ 318 'ಮೂರ್ಖ ಸಾವು' ಪ್ರಕರಣಗಳಲ್ಲಿ ಸತ್ತವರಲ್ಲಿ 282 ಮಂದಿ ಪುರುಷರು. ಅಂದರೆ ಡಾರ್ವಿನ್ ವಾದದ ಪ್ರಕಾರ, 'ಉತ್ತಮ ವಂಶವಾಹಿಗಳು ಮಾತ್ರ ಉಳಿಯುತ್ತವೆ'.

ಸ್ನೇಹಿತೆಗೆ ಮದುವೆಯ ಪ್ರಸ್ತಾವ ಸಲ್ಲಿಸಲು ಕೆಲವರು ರೋಮ್ಯಾಂಟಿಕ್ ಡಿನ್ನರ್, ವೈನ್ ಬಾಟಲ್ ಮೊದಲಾದವುಗಳ ಮೊರೆ ಹೋಗುತ್ತಾರೆ. ಆದರೆ ಬ್ರಿಟನ್ನಿನ ಬೆನ್ ತನ್ನ ಗೆಳತಿಗೆ ತಾನು ನಿತ್ಯ ಓಡುವ ಜಾಗವನ್ನು ಜಿಪಿಎಸ್‌ನಲ್ಲಿ ಮ್ಯಾಪ್ ಮಾಡಿ ಅದು 'ವಿಲ್ ಯು ಮ್ಯಾರಿ ಮಿ?' ಎಂದು ಕಾಣಿಸುವ ಹಾಗೆ ಮಾಡಿದನಂತೆ. ಅದನ್ನು ಫೇಸ್‌ಬುಕ್‌ನಲ್ಲಿ ಹಾಕಿದ. ಆತನ ಗೆಳತಿ ಒಲಿವಿಯ ಸಾರ್ವಜನಿಕ ಮುಜುಗರ ತಪ್ಪಿಸಿಕೊಳ್ಳಲು ಪ್ರಸ್ತಾವ ಒಪ್ಪಿಕೊಂಡಳಂತೆ. ಒಲ್ಲದ ಮದುವೆಗೆ ಹೀಗೂ ಒಪ್ಪಿಸಬಹುದು ಎಂದು ಬೆನ್ ತೋರಿಸಿಕೊಟ್ಟಿದ್ದಾನೆ.



ಲಂಡನ್ನಿನಲ್ಲಿ  ಈ ವರ್ಷದ ಕ್ರಿಸ್ಮಸ್ ಫ್ಯಾಷನ್ ಇದು. ಗಡ್ಡಗಳಿಗೆ ಒಡವೆಗಳನ್ನು ತಗುಲಿಸುವ ಕೆಲಸಕ್ಕೆ ಜಾಹೀರಾತು ಕಂಪೆನಿಯೊಂದು ಮುಂದಾಗಿದೆ. ತಲೆಗೂದಲಿಗೆ, ಮೈಗೆ ಒಡವೆಗಳನ್ನು ಜೋತು ಬೀಳಿಸಿಕೊಂಡು ಓಡಾಡುವ ಯುವ ಜನತೆಗೆ ಈ ಫ್ಯಾಷನ್ ಹೇಳಿ ಕೊಡಲು ಕಂಪೆನಿಯೇ ಬೇಕಾಯ್ತು.




ಎಡಿನ್‌ಬರ್ಗ್ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಈ ಬೆಕ್ಕಿಗೂ ಸದಸ್ಯತ್ವ ನೀಡಲಾಗಿದೆ. ಸ್ಥಳೀಯ ಚರ್ಚ್‌ನಲ್ಲಿ ಇಲಿ ಹಿಡಿಯುವ ಕೆಲಸ ಮಾಡಲೊಪ್ಪದ ಜೋರ್ಡಾನ್ ಹೆಸರಿನ ಬೆಕ್ಕಿಗೆ ಗ್ರಂಥಾಲಯದಲ್ಲಿ ಯುವ ವಿದ್ಯಾರ್ಥಿ ಮಿತ್ರರ ಕಂಪೆನಿಯೇ ಇಷ್ಟವಾಗುತ್ತಿದೆಯಂತೆ. ಇದರ ಹೆಸರಲ್ಲೂ ಫೇಸ್‌ಬುಕ್ ಖಾತೆ ತೆರೆಯಲಾಗಿದ್ದು, ಉತ್ಸಾಹಿ ವಿದ್ಯಾರ್ಥಿಗಳು ಬೆಕ್ಕಿಗೂ ಪದವಿ ನೀಡುವಂತೆ ಒತ್ತಾಯಿಸುವ ಸಾಧ್ಯತೆಯೂ ಇದೆಯಂತೆ, ಪರೀಕ್ಷೆ ಯಾರು ಬರೆಯುತ್ತಾರೋ!